








## ಕಾಸರವಳ್ಳಿ ನಂಟು

ಕೆ.ಆರ್. ಸ್ವಾಮಿ ಅವರು ಖ್ಯಾತ ಚಿತ್ರ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರಿಗೆ ಮಾವ (ಅಮ್ಮನ ತಮ್ಮ). ಸ್ವಾಮಿ ಅವರ ಕತೆ ಹೇಳುವ ಶೈಲಿಯನ್ನು ಕಾಸರವಳ್ಳಿ ಅವರು ಮೆಚ್ಚಿಕೊಂಡಿದ್ದಾರೆ ಹಾಗೂ ತಮ್ಮ ಕೆಲವು ಸಿನಿಮಾಗಳಲ್ಲಿ ಅವರ ವ್ಯಂಗ್ಯಚಿತ್ರ ವಸ್ತುಗಳನ್ನು ಬಳಸಿದ್ದಾರಂತೆ!

## ಹಿರಿಯ ವ್ಯಂಗ್ಯಚಿತ್ರಕಾರ ಕೆ.ಆರ್. ಸ್ವಾಮಿ ಸಂದರ್ಶನ

ಮಲೆನಾಡಿನ ತೀರ್ಥಹಳ್ಳಿ ನಮ್ಮೂರು.

**◆ ಓದಿದ್ದು ಎಂಜಿನಿಯರಿಂಗ್. ವ್ಯಂಗ್ಯಚಿತ್ರದಲ್ಲಿ ಆಸಕ್ತಿ ಹೇಗೆ?**

ಹೈಸ್ಕೂಲ್‌ನಲ್ಲಿದ್ದಾಗಲೇ ವ್ಯಂಗ್ಯಚಿತ್ರದಲ್ಲಿ ಆಸಕ್ತಿ ಬಂತು. ಆನಂತರ ಅಮೆರಿಕದಲ್ಲಿನ 'ರೇ ಬರ್ನ್ಸ್ ಕೋರ್ಸ್ ಆಫ್ ಕಾರ್ಟೂನಿಂಗ್' (Raye burns course of cartooning) ಮೂಲಕ ಅಂಚೆ ಶಿಕ್ಷಣ ಪಡೆದೆ. ಕಾರ್ಟೂನಿಂಗ್ ಪ್ರವೃತ್ತಿಯಾಯ್ತು.

**◆ ನಿಮ್ಮಲ್ಲಿದ್ದ ವ್ಯಂಗ್ಯಚಿತ್ರ ಕಲೆಯನ್ನು ಪ್ರೋತ್ಸಾಹಿಸಿದವರು ಯಾರು?**

ಆಗಿನ ಕಾಲದ ಕನ್ನಡ ಪತ್ರಿಕೆಗಳ ಸಂಪಾದಕರ ಪ್ರೋತ್ಸಾಹವೇ ಶ್ರೀರಕ್ಷೆ! 'ಸುಧಾ' ಹಾಗೂ 'ಮಯೂರ' ಪತ್ರಿಕೆಗಳು ತಮ್ಮ ಆರಂಭಿಕ ಕಾಲದಲ್ಲೇ ನನ್ನ ವ್ಯಂಗ್ಯಚಿತ್ರಗಳಿಗೆ ಜಾಗ ಮಾಡಿಕೊಡುತ್ತಿದ್ದರು. ಅದು ಹೆಮ್ಮೆಯ ಸಂಗತಿ. ಕೆಲಕಾಲ 'ಪ್ರಜಾವಾಣಿ'ಯಲ್ಲಿ 'ಸುದ್ದಿಗೆ ಗುದ್ದು' ಹಾಗೂ 'ಸುಧಾ'ದಲ್ಲಿ 'ಮಾತಾಡುವ ಗೆರೆಗಳು' (ಕ್ಯಾಪ್ಷನ್‌ಲೆಸ್ ಕಾರ್ಟೂನ್) ಎಂಬ ಶೀರ್ಷಿಕೆ ಅಡಿಯಲ್ಲಿ ಕಾರ್ಟೂನ್‌ಗಳನ್ನು ರಚಿಸಿದ್ದನ್ನು ಮರೆಯಲಾಗದು.

**◆ ವೃತ್ತಿಯ ಜೊತೆಗೆ ವಿಡಂಬನಾ ಕ್ಷೇತ್ರದಲ್ಲೂ ಸಕ್ರಿಯರಾಗಿದ್ದರಿಂದ ಕಾರ್ಯಕ್ಷೇತ್ರದಲ್ಲೇನಾದರೂ ವ್ಯತ್ಯಯ ಅಥವಾ ಇರುಸುಮುರುಸು ಆಗಿದ್ದಿದೆಯೇ?**

ಇಲ್ಲ, ಇರುಸುಮುರುಸಿನ ಬದಲಾಗಿ ಒಳ್ಳೆಯ ಹೆಸರೇ ಬಂದಿತು. ಕರ್ತವ್ಯ ನಿರ್ವಹಣೆಯ ಕಾಲದಲ್ಲಿ ಉಂಟಾಗುವ ಏರುಪೇರುಗಳನ್ನು ನಗೆಚಿತ್ರಗಳಲ್ಲಿ ಹಿಡಿದಿಡುತ್ತಿದ್ದೆ. ಅವನ್ನು ನಮ್ಮ 'ಕೆಇಬಿ ನ್ಯೂಸ್ ಲೆಟರ್'ನಲ್ಲಿ ಪ್ರಕಟಿಸುವ ಮೂಲಕ ಇಲಾಖೆಯ ವ್ಯಂಗ್ಯಚಿತ್ರಕಾರನೆಂದು ಗುರುತಿಸಿದ್ದರು. ಸನ್ಮಾನಿಸಿ ಗೌರವಿಸಿದ್ದರು.

**◆ ಈವರೆಗೆ ನೀವು ಎಷ್ಟು ಸಾವಿರ ವ್ಯಂಗ್ಯಚಿತ್ರಗಳನ್ನು ಬರೆದಿರಬಹುದು?**

ಲೆಕ್ಕವಿಟ್ಟಿಲ್ಲ. ಸಾಕಷ್ಟು ಮೂಲ ಪ್ರತಿಗಳು ಸಂಗ್ರಹಭಾಗ್ಯ ಕಾಣದೇ ಹಾಳಾಗಿವೆ. ಕಾರ್ಯಭಾರದ ಒತ್ತಡದಲ್ಲಿ ಜೋಪಾನ ಮಾಡುವ ವ್ಯವಧಾನವಿರಲಿಲ್ಲ. ಈಗ ಆ ಕೆಲಸದಲ್ಲಿ ತೊಡಗಿದ್ದೇನೆ. ಆದರೆ ಕನ್ನಡದ ಸರಿಸುಮಾರು ಎಲ್ಲಾ ದಿನ, ವಾರ, ಮಾಸ ಪತ್ರಿಕೆಗಳಲ್ಲೂ ಹಾಗೂ ವಾರ್ಷಿಕ ವಿಶೇಷಾಂಕಗಳಲ್ಲೂ ಸಾಕಷ್ಟು ಕಾರ್ಟೂನ್‌ಗಳು ಪ್ರಕಟವಾಗಿವೆ. ಆಗಿನ ಖ್ಯಾತ ಪತ್ರಿಕೆ 'ಶಂಕರ್ಸ್ ವೀಕ್ಲಿ', 'ಕ್ಯಾರವಾನ್' ಹಾಗೂ ಹಿಂದಿಯ 'ಸರಿತಾ' ಪತ್ರಿಕೆಗಳಲ್ಲೂ ಕಾರ್ಟೂನ್‌ಗಳು ಪ್ರಕಟಗೊಂಡಿವೆ. ಪಾಕೆಟ್ ಕಾರ್ಟೂನ್‌ಗಳಂತೆ ಕಾರ್ಟೂನ್ ಸ್ಟ್ರಿಪ್‌ಗಳೂ ಪ್ರಕಟಗೊಂಡಿವೆ.

**◆ ಎಂತಹ ವ್ಯಂಗ್ಯಚಿತ್ರಗಳನ್ನು ಹೆಚ್ಚು ಮಾಡಿದ್ದೀರಿ?**

ಕಾಲಮಿತಿಗೆ ಒಳಪಡುವ ರಾಜಕೀಯ ವಿಡಂಬನೆಗಳಿಗಿಂತ ರಾಜಕೀಯೇತರ ವ್ಯಂಗ್ಯಚಿತ್ರಗಳೇ ಹೆಚ್ಚು. ಸಾಮಾನ್ಯ ವರ್ಗದವರ ದಿನನಿತ್ಯದ ಆಗುಹೋಗುಗಳನ್ನು ವಸ್ತುವನ್ನಾಗಿಸಿದ್ದೇನೆ. ಅವು ಸಾರ್ವಕಾಲಿಕವಾಗಿದ್ದು ಇಂದಿಗೂ ಪ್ರಸ್ತುತವೆನಿಸುತ್ತವೆ. ಅಲ್ಲದೆ ಅವು ಶ್ರೀಸಾಮಾನ್ಯರನ್ನು ಬೇಗ ತಲುಪುತ್ತವೆ, ಜನಪ್ರಿಯವೂ ಆಗುತ್ತವೆ.

**◆ ನಗಿಸುವುದಷ್ಟೇ ನಿಮ್ಮ ವ್ಯಂಗ್ಯಚಿತ್ರಗಳ ಉದ್ದೇಶವಾ?**

ನಗಿಸುವುದಷ್ಟೇ ಅಲ್ಲ. ನಗುವಿನ ಹಿಂದೆ ನೋವಿದೆ. ಸಂತಸದ ಹಿಂದೆಯೇ ದುಃಖವಿರುತ್ತೆ. ಮಾನವೀಯತೆಯೇ ಮರೆಯಾಗುತ್ತಿರುವ ಈ ಕಾಲದಲ್ಲಿ ಬದುಕಿನ ವಿಪರ್ಯಾಸಗಳನ್ನು ಬಿಂಬಿಸುವಂತಹ ಸಂದೇಶಗಳನ್ನು ನನ್ನ ಕಾರ್ಟೂನ್‌ಗಳ ಮೂಲಕ ಕೊಟ್ಟಿದ್ದೇನೆ. ನಗು ಲೇಪನವಷ್ಟೆ!

**◆ ವ್ಯಂಗ್ಯಚಿತ್ರಕಾರರ ಸಂಘಟನೆಯೊಂದಿಗಿನ ನಿಮ್ಮ ಒಡನಾಟ ಯಾವ ಬಗೆಯದು?**

'ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ'ದ ಉದಯ ಕಾಲದಲ್ಲಿ ಅದರ ಪ್ರೇರಕನಾಗಿಯೂ ಇದ್ದೆ. ಅಲ್ಲದೆ ಸಂಘದ ಪ್ರಥಮ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೇನೆ. 'ಭಾರತೀಯ ವ್ಯಂಗ್ಯಚಿತ್ರ ಸಂಸ್ಥೆ'ಯಲ್ಲಿ ವ್ಯಂಗ್ಯಚಿತ್ರಗಳನ್ನು ಪ್ರದರ್ಶಿಸಿದ್ದೇನೆ. ಶಿವಮೊಗ್ಗ, ಮೈಸೂರು, ಧಾರವಾಡ ಹಾಗೂ ಮತ್ತಿತರೆಡೆಗಳಲ್ಲಿ ಕಾರ್ಟೂನ್ ಶೋ ನಡೆಸಿದ್ದೇನೆ.

**◆ ಹಿರಿಯ ವ್ಯಂಗ್ಯಚಿತ್ರಕಾರರಾಗಿ ಯುವ ಕಾರ್ಟೂನಿಸ್ಟ್‌ಗಳಿಗೆ ನಿಮ್ಮ ಉಡುಗೊರೆಗಳೇನು?**

ನನ್ನ ವ್ಯಂಗ್ಯಚಿತ್ರಗಳ ಸಂಗ್ರಹದಿಂದ ಆಯ್ದ ಕಾರ್ಟೂನ್ ಪುಸ್ತಕ 'ಬ್ರಹ್ಮಗಂಟು' ಹಾಗೂ ಕ್ಯಾಪ್ಷನ್‌ಲೆಸ್ ಕಾರ್ಟೂನುಗಳ 'ಲಾಫರ್ ಡೋಸ್' ಪ್ರಕಟವಾಗಿವೆ. ಬಹುಶಃ ಇವೆರಡು ಯುವ ವ್ಯಂಗ್ಯಚಿತ್ರಾಸಕ್ತರಿಗೆ ಉಪಯುಕ್ತ ಎನ್ನಿಸಬಹುದು. ■